ಇದರಿಂದ ಬೇರೆ ರಾಜ್ಯಕ್ಕೂ ನಮ್ಮ ರಾಜ್ಯಕ್ಕೂ ಲಾಟರಿ ಮಾರಾಟದ ಬಗ್ಗೆ ಒಪ್ಪಂದವಾಗಿದೆಯೇ? ಆ ರೀತಿ ಒಪ್ಪಂದವಾಗಿದ್ದರೆ ನಮ್ಮ ರಾಜ್ಯಕ್ಕೆ ಏನಾದರೂ ಆದಾಯ ಬರುತ್ತದೆಯೇ? ಇದರ ಬಗ್ಗೆ ತಮ್ಮ ವಿವರಣೆಯನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು : ಹೇಳಿಕೆಯನ್ನು ಪೂರ್ಣ ಓದಲಿಲ್ಲವೇ? ದಯಮಾಡಿ ಇನ್ನೊಂದು ಸಾರಿ ಓದಿ. ಉತ್ತರ ಸಮರ್ಪಕವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಅತ್ಯಂತ ಸಂತೋಷದ ಸಂಗತಿ ಯುಎನ್‌ಐನಲ್ಲಿ ಟಿಲಿಪ್ರಿಂಟ್ ಆಗಿ ಬರುತ್ತಿದೆ. ಕೊಯಮತ್ತೂರಿನಲ್ಲಿ ಶಿರಮೊಗ್ಗಿ ಹತ್ತಿರ....

ಶ್ರೀ ಮಾಟಾಳ್ ನಾಗರಾಜ್ : ವೀರಪ್ಪನ್‌ನನ್ನು ಸರ್ಕಾರ ಹಿಡಿದಿದೆಯೇ, ಎಂಬ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ಗಮನ ಸೆಳೆಯುವ ಸೂಚನೆ ಆದ ನಂತರ, ತೆಗೆದುಕೊಳ್ಳುವುದಾಗಿ ತಾವು ಹೇಳಿದಿರಿ. ನಾನು ತಮ್ಮ ಮಾತಿನ ಪ್ರಕಾರ ಕುಳಿತಿದ್ದೇನೆ. ದಯಮಾಡಿ....

ಅಧ್ಯಕ್ಷರು : ಅವರು ಆ ವಿಷಯ ಪ್ರಸ್ತಾಪ ಮಾಡುತ್ತಾರೆಂದು ನನಗೆ ಗೊತ್ತಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವೇ, ಮಾತನಾಡಿ. ವೀರಪ್ಪನ್ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವುದರಲ್ಲಿ ಡಿವೈಎಸ್‌ಪಿ ಯಶಸ್ವಿಯಾಗಿದ್ದಾರೆ. ಅದು ಆನಂದದ ಸಂಗತಿ. ಮತ್ತು ವೀರಪ್ಪನ್‌ನ ಬಲಗೈ ಭಂಟರು 3 ಜನರನ್ನು ದಸ್ತಗಿರಿ ಮಾಡಿದ್ದಾರೆ. ಗುಂಡಿನ ಚಕಮಕಿ ಆಗುತ್ತಿದೆ. ಇದಕ್ಕೆ ಗೃಹ ಮಂತ್ರಿಗಳು ಇದ್ದಾರೆ. ಏನಾಗಿದೆ ಎಂಬ ವಿವರಗಳು ಇದ್ದರೆ ನೀಡಲಿ.

ಅಧ್ಯಕ್ಷರು : ಬಹಳ ಹೊತ್ತಿಗೆ ಮೊದಲೆ ಸನ್ಮಾನ್ಯ ಸದಸ್ಯರಾದ ಮಾಟಾಳ್ ನಾಗರಾಜ್‌ರವರು ನನ್ನ ಅನುಮತಿ ಕೇಳಿದರು. ಗಮನಸೆಳೆಯುವ ಸೂಚನೆಯಾದ ಮೇಲೆ ಪ್ರಸ್ತಾಪ ಮಾಡೋಣ ಎಂದು ಹೇಳಿದೆ. ತಾವು ಈ ವಿಷಯ ಪ್ರಸ್ತಾಪ ಮಾಡುವ ಅಂದಾಜು ಇರಲಿಲ್ಲ.

ಶ್ರೀ ಮಾಟಾಳ್ ನಾಗರಾಜ್ : ನಾನು ಒಂದಂಕಿ ಲಾಟರಿ ಬಗ್ಗೆ ಎತ್ತಿದ್ದಾರೆಂದು ತಿಳಿದುಕೊಂಡೆ. ಇವರು ಈ ತರಹ ಎತ್ತಿರುವುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು : ನಾಗರಾಜ್‌ರವರೇ, ಅವರು ಒಂದು ಅಂಕಿಯಲ್ಲಿ ಈಗ ಇಲ್ಲ, ಎರಡು ಅಂಕಿಯಲ್ಲಿದ್ದಾರೆ. 40 ಜನ ಬಂದಿದ್ದಾರೆ. ಒಂದಂಕಿಗೂ ಅವರಿಗೂ ಏನು ಸಂಬಂಧ?

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ದಂತಚೋರ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ

ಶ್ರೀ ಮಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನರ ಹಂತಕ ದಂತ ಚೋರ ವೀರಪ್ಪನ್‌ನನ್ನು ಹಿಡಿಯುವ ಬಗ್ಗೆ ಈ ಸದನದಲ್ಲಿ ಸುಮಾರು ಐದಾರು ವರ್ಷಗಳಿಂದ ನಾವು ಒಂದೇ ಸಮನೆ ಕೇಳಿದ್ದೇವೆ. ಬಂದಂತಹ ಎಲ್ಲಾ ಮುಖ್ಯ ಮಂತ್ರಿಗಳು, ಎಲ್ಲಾ ಗೃಹ ಮಂತ್ರಿಗಳು ನಾವು ನಾಳೆ ಬೆಳಿಗ್ಗೆನೇ ಹಿಡಿದು ತರುತ್ತೇವೆಂದು ಭರವಸೆಯನ್ನು ಕೊಟ್ಟಿದ್ದು ಉಂಟು. ಬಂಗಾರಪ್ಪನವರು ನಾವು ಹೇಳಿಲ್ಲ ಎಂದು ಹೇಳುತ್ತಾರೆ. ಅವರ ಕಾಲದಲ್ಲಿದ್ದ ಗೃಹ ಮಂತ್ರಿಗಳು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು ನಮ್ಮ ಕಾಂಗ್ರೆಸ್‌ನ ಮುಖಂಡರು ಏನು ಹೇಳುತ್ತಾರೆ

ಎಂದರೆ ನಾವು ಯಾರೂ ಹೇಳಲಿಲ್ಲ ಎಂದು ಹೇಳುತ್ತಾರೆ. ಅದು ಕಡತದಲ್ಲಿ ಹೋಗಿದೆ. ನಮ್ಮ ವೀರಪ್ಪ ಮೊಯಿಲಿ ಮುಖ್ಯ ಮಂತ್ರಿಗಳು ಆಗಿದ್ದಾಗ ಹತ್ತಿರದಲ್ಲಿಯೇ ಹಿಡಿಯುತ್ತೇವೆಂದು ಹೇಳಿದ್ದು ಮಾನ್ಯ ಬಂಗಾರಪ್ಪನವರು ಸಹ ಇದೇ ಮಾತನ್ನು ಹೇಳಿದರು. ಅವರು ನಾಳೆ ಅಂದರೆ ಬಹಳ ಹತ್ತಿರದಲ್ಲಿ ಹಿಡಿಯುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಬಸವಲಿಂಗಪ್ಪನವರು ಒಂದು ವಾರದಲ್ಲಿ ಅಂತ ಹೇಳಿದರು. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ವಾರ, ಒಂದು ದಿವಸ, ಇದರಲ್ಲಿ ವ್ಯತ್ಯಾಸ ಇರಬಹುದು. ಬಹಳ ಹತ್ತಿರದಲ್ಲಿಯೇ ಹಿಡಿಯುತ್ತೇವೆಂದು ಹೇಳಿದ್ದು ನಿಜ. ಅದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ಕಾಣುತ್ತದೆ. ಈಗ ಹೋದ ಸರ್ಕಾರ ಬದಲಾವಣೆಯಾಗಿದೆ ಮತ್ತು ಹೊಸ ಸರ್ಕಾರ ಬಂದಿದೆ. ಈಗ ಹೊಸ ಗೃಹ ಸಚಿವರು ಮಾನ್ಯ ಸಿಂಧ್ಯರವರು ಇವತ್ತು ಸುಮಾರು ಎರಡು ತಿಂಗಳಿಂದ ತಮಿಳುನಾಡಿನ ಒಂದು ಜಿಲ್ಲೆಯಿಂದ ಅದೂ ಬಹಳ ವ್ಯವಸ್ಥಿತವಾಗಿ ಅವರು ಇವರ ಕಡೆ ಕಳುಹಿಸತಕ್ಕದ್ದು, ಇವರು ಅವರ ಕಡೆ ಕಳುಹಿಸತಕ್ಕಂಥದ್ದು, ಅವರಿಗೆ ಕೆಲವು ಷರತ್ತುಗಳನ್ನು ಹಾಕಿರತಕ್ಕಂಥಾದ್ದು ಇದೆಲ್ಲಾ ಇವತ್ತು ಒಂದು ಕಡೆ ನಡೆಯುತ್ತಿದೆ. ಇವತ್ತು ನನಗೆ ತಿಳಿದಿರುವ ಪ್ರಕಾರ ಪ್ರಗತಿ ಏನಾಗಿದೆ. ಅಂದರೆ, ನಾವು ಅವರ ಕಡೆಯ ಜನರನ್ನು ಬಂಧಿಸಿದ್ದೇವೆ ಇವತ್ತು ಸಂಜೆ ಒಳಗೆ ವೀರಪ್ಪನ್‌ನನ್ನು ಹಿಡಿಯಬಹುದು ಎಂಬ ವಿಚಾರವನ್ನು ಸುಮ್ಮನೆ ಗಾಳಿ ಸುದ್ದಿಗಳು ಕೆಲವು ಮಾಧ್ಯಮಗಳ ಮೂಲಕ ನಾವು ನೋಡುತ್ತಿದ್ದೇವೆ. ಆದ್ದರಿಂದ ನಮ್ಮ ಕರ್ನಾಟಕ ಸರ್ಕಾರಕ್ಕೆ ಈ ಬಗ್ಗೆ ಇರತಕ್ಕಂಥ ಸ್ಪಷ್ಟ ಮಾಹಿತಿ ಏನು? ಇವರನ್ನು ಹಿಡಿದಿದ್ದರೆ ಹಾಗೂ ಮಿಕ್ಕ ವಿಚಾರಗಳು ಏನಿದೆ ಅದನ್ನು ಹೇಳಬೇಕು. ಇದರ ಬಗ್ಗೆ ಯಾವ ವಿಷಯವನ್ನು ಮುಚ್ಚಿಡದೆ ಇದುವರೆಗೆ ನಡೆದಿರುವ ಪ್ರಗತಿ ಏನು ಹಾಗೂ ಈಗ ಬಂದಿರುವ ಹೊಸ ಸರ್ಕಾರದ ಗೃಹಮಂತ್ರಿಗಳು ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಿಳಿಸಬೇಕು. ಅಕಸ್ಮಾತ್ ಅವರು ಹಿಡಿಯದೆ ಇದ್ದರೆ ಇಷ್ಟು ದಿವಸಗಳಲ್ಲಿ ಹಿಡಿಯುತ್ತೀರಿ ಎನ್ನತಕ್ಕಂಥ ಭರವಸೆಯನ್ನು ಕೊಡಬಲ್ಲಿರಾ? ಇದರ ಬಗ್ಗೆ ಸವಿಸ್ತಾರವಾದ ವಿಚಾರವನ್ನು ಮಾನ್ಯ ಗೃಹ ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು : ಇನ್ನು ಸವಿಸ್ತಾರವಾಗಿ ಬೇಡ ಏಕೆಂದರೆ ನಿಯಮ ಎಲ್ಲಾ ಬದಿಗೊತ್ತಿ ತೆಗೆದುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗಾರಾಜ್ : ಸಂಕ್ಷಿಪ್ತವಾಗಿ ಹೇಳಲಿ, ಹೇಳಲಿ ಇದರ ಬಗ್ಗೆ ನನ್ನದೂ ಏನು ಅಭ್ಯಂತರ ಇಲ್ಲ, ಆದರೆ ಎಲ್ಲಾ ವಿಚಾರವನ್ನು ಸ್ಪಷ್ಟವಾಗಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

12.15 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ವಾಟಾಳ್ ನಾಗರಾಜ್‌ರವರು ಇದನ್ನು ಪ್ರಸ್ತಾಪ ಮಾಡುವುದಕ್ಕೆ ತಮ್ಮಲ್ಲಿ ಕೇಳಿರುವುದು ನನಗೆ ಗೊತ್ತಿಲ್ಲದ ಈ ವಿಷಯದ ಬಗ್ಗೆ ಮಾತನಾಡಿದೆ. ಈಗ ತಾನೇ ಟೆಲಿಪ್ರಿಂಟರ್‌ನಲ್ಲಿ ಬರುತ್ತಿರುವಂತಹ ಸಂತೋಷದ ಸಂಗತಿಯನ್ನು ನಾನು ನೋಡಿ ಬಂದಿದ್ದೇನೆ. ಯಾವ ವಿಶೇಷ ಕಾರ್ಯಾಚರಣೆ ಪಡೆ ಇತ್ತು, ಹಾಗೂ ಕೊಯಮತ್ತೂರು ಜಿಲ್ಲೆ ಸಿರಿಮೊಗೆ ಹತ್ತಿರ ಕಾಡುಗಳ್ಳ ವೀರಪ್ಪನ್ ಡಿವೈಎಸ್‌ಪಿ ಚಿದಂಬರ ನಾಥ್ ಮತ್ತು ಇನ್ನಿಬ್ಬರನ್ನು ಬಂಧನ ಮಾಡಿ, ಒತ್ತೆಯಾಳಾಗಿ ಇಟ್ಟುಕೊಂಡು ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಿ ಅನೇಕ ಷರತ್ತುಗಳನ್ನು, ಸವಾಲುಗಳನ್ನು ಹಾಕಿದ್ದನೋ ಅಂತಹವನೊಂದಿಗೆ ಪ್ರಾಣದ ಹಂಗನ್ನು ತೊರೆದು ವಿಶೇಷ ಕಾರ್ಯಾಚರಣೆ ಸಿಬ್ಬಂದಿಯ ನಡುವೆ ಗುಂಡಿನ ಕಾಳಗ ನಡೆಯುತ್ತಿದೆ ಎನ್ನುವಂತಹ ಸುದ್ದಿ ಬರುತ್ತಿದೆ. ನನಗೆ ಸಂತೋಷ ಆಗುತ್ತರುವಂತಾದ್ದು

ಜೀವಸಹಿತ ಡಿ.ವೈ.ಎಸ್.ಪಿ. ಚಿದಂಬರನಾಥ್ ಹಾಗೂ ಇತರೆ ಸಿಬ್ಬಂದಿ ಅಂದರೆ ಒತ್ತೆಯಾಳಾಗಿದ್ದವರನ್ನು ಬಿಡುಗಡೆ ಮಾಡಿದ್ದಾರೆ ಎನ್ನುವಂತಹ ಸ್ಪಷ್ಟವಾದ ವರದಿ ಬರುತ್ತಿದೆ. ಇನ್ನೊಂದು ಸಂತೋಷದ ಸಂಗತಿ ಎಂದರೆ ವೀರಪ್ಪನ್ ಬಲಗೈ ಬಂಟನಂತಿದ್ದ ಐಯ್ಯದೊರೆ ಮತ್ತು ರಂಗಸ್ವಾಮಿ, ಕುಂಜನ್ ಎನ್ನುವವರನ್ನು ಸಹ ಬಂಧನ ಮಾಡಿದ್ದಾರೆ ಎಂದು. ಅಲ್ಲಿ ಗುಂಡಿನ ಕಾಳಗ ನಡೆಯುತ್ತಿದೆ. ಈಗ ಅಲ್ಲಿ ವೀರಪ್ಪನ್ ಕೈಗೆ ಸಿಕ್ಕಿದ್ದಾನೋ, ಅವನು ಜೀವಂತ ಇದ್ದಾನೋ ಇಲ್ಲವೋ ಅದು ಗೊತ್ತಾಗಬೇಕಾಗಿದೆ. ಏನೇ ಆಗಲಿ ಬಹಳ ದೊಡ್ಡ ಸಾಹಸ ಮಾಡಿದ್ದಾರೆ. ಈ ದೇಶದ 82 ಕೋಟಿ ಜನಕ್ಕೆ ಈ ಎಸ್‌ಟಿಎಫ್ ಸಿಬ್ಬಂದಿ ಅಭಿನಂದನಾರ್ಹರು. ಅವರು ಪ್ರಾಣದ ಹಂಗನ್ನು ತೊರೆದು ಈ ಕೆಲಸವನ್ನು ಮಾಡಿರುತ್ತಾರೆ. ಒಬ್ಬ ಕಾಡುಗಳ್ಳನನ್ನು ಹಿಡಿಯುವುದಕ್ಕೆ ಆಗದೇ ನಮ್ಮ ಸರ್ಕಾರ ವಿಫಲ ಪ್ರಯತ್ನ ಮಾಡಿದ ಮೇಲೂ ಸಹ ಈ ಕಾಡಿನ ಸುತ್ತ ಆವರಿಸಿ ದಿಟ್ಟ ಹೆಜ್ಜೆಯನ್ನು ಏನು ಇಡಬೇಕಾಗಿತ್ತು ಅದರಲ್ಲಿ ಒಂದು ರೀತಿಯ ಕೊರತೆಗಳು ಆಗಿತ್ತು. ಅದಕ್ಕೆ ಕಾರಣಗಳು ಬೇಕಾದಷ್ಟು ಇರಬಹುದು. ಆದರೆ ಅವತ್ತು ಅನೇಕ ಜನ ಉನ್ನತಾಧಿಕಾರಿಗಳು ಪ್ರಾಣವನ್ನು ಈ ಒಂದು ಕಾರಣಕ್ಕಾಗಿ ತೆತ್ತಬೇಕಾಯಿತು. ಅವರ ತ್ಯಾಗಕ್ಕೆ, ಆ ಒಂದು ಬಲಿದಾನಕ್ಕೆ ಒಂದು ಸಾರ್ಥಕವಾಯಿತು. ಅದಕ್ಕೆ ಗೃಹಮಂತ್ರಿಗಳು ಈ ಹಿನ್ನೆಲೆಯಲ್ಲಿ ತಮಗೆ ಏನು ಸತ್ಯಸಂಗತಿಯನ್ನು ವರದಿಯಾಗಿದೆ ಅಲ್ಲಿ ವೀರಪ್ಪನ್ ಬಂಧನವಾಗಿದೆಯೋ, ಇದರ ಒಂದು ವಿವರವನ್ನು ನೀಡಿದರೆ ಮಾತನಾಡುವುದಕ್ಕೆ ಅನುಕೂಲವಾಗಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹಸಚಿವರು) : ಮಾನ್ಯ ಅಧ್ಯಕ್ಷರೇ, ವೀರಪ್ಪನ್ ಬಂಧನ ಹಾಗೂ ಈತನ ಸಹಚರರ ಬಂಧನ, ಅವನ ಆಕೃತ್ಯಗಳನ್ನು ತಡೆಗಟ್ಟುವುದು ಅತಿ ಅವಶ್ಯಕವಾಗಿರತಕ್ಕಂಥಾದ್ದು. ತಮಿಳುನಾಡಿನ ಟಾಸ್ಕ್‌ಫೋರ್ಸ್ ಮತ್ತು ಕರ್ನಾಟಕದ ಟಾಸ್ಕ್‌ಫೋರ್ಸ್ ಜಂಟಿಯಾಗಿ ಕಾರ್ಯಾಚರಣೆ ಮಾಡುತ್ತಿರತಕ್ಕಂಥಾದ್ದು ತಮಗೆಲ್ಲರಿಗೂ ಗೊತ್ತಿದೆ.

ಈ ಕೆಲಸವನ್ನು ಯಶಸ್ವಿಯಾಗಿ ಆಗುವ ದೃಷ್ಟಿಯಿಂದ ಅನೇಕ ವಿಚಾರಗಳನ್ನು ಬಹಿರಂಗಗೊಳಿಸತಕ್ಕಂಥಾದ್ದು, ಭದ್ರತೆ ಕಾರ್ಯಾಚರಣೆ ದೃಷ್ಟಿಯಿಂದ ಅಷ್ಟೊಂದು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ. ಕಾರ್ಯಾಚರಣೆಯ ವಿವರಗಳು ಬಹಳ ರಂಜನೀಯವಾಗಿರುತ್ತವೆ, ಮತ್ತು ಸಾಹಸಮಯವಾಗಿರುತ್ತವೆ. ಹಾಗೂ ಶೌರ್ಯದಿಂದ ಕೂಡಿರುತ್ತದೆ. ಆದರೆ ಕೆಲಸ ಮಾಡುವವರಿಗೆ ನಾನು ಅವೆಲ್ಲಾ ವಿವರಗಳನ್ನು ಹೇಳುವುದರಿಂದ ಏನೂ ಉಪಯೋಗ ಆಗುವುದಿಲ್ಲ. ಗೌರವಾನ್ವಿತ ಎಲ್ಲಾ ಮಾನ್ಯ ಸದಸ್ಯರುಗಳ ಕಳಕಳಿಯನ್ನು ಮತ್ತು ಜನರ ಕಳಕಳಿಯನ್ನು ಈ ಸರ್ಕಾರ ಅರ್ಥಮಾಡಿಕೊಂಡಿದೆ. ಇದಕ್ಕೆ ನನಗನಿಸುತ್ತದೆ ನನಗೆ ಏನಾದರೂ ಫಲಿತಾಂಶ ಬೇಕಾದರೆ ಮೌನವೇ ಸರಿಯಾದ ಉತ್ತರ ಎಂದು. ಆದರೆ ನಾನು ಸೂಕ್ತವಾದ ಸಂದರ್ಭದಲ್ಲಿ ಈ ಸದನವನ್ನು ಸಂಪೂರ್ಣವಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲಾ ವಿಚಾರಗಳನ್ನು ಈ ಸದನದ ಮುಂದೆ ಇಡತಕ್ಕಂಥ ಭರವಸೆಯನ್ನು ಕೊಡುತ್ತೇನೆ. ಆದರೆ ಒಂದು ವಿಚಾರವನ್ನು ಮಾತ್ರ ನಾನು ಇಲ್ಲಿ ತಿಳಿಸುವುದೇನೆಂದರೆ, ನಾವು ಕಳೆದ ವರ್ಷದಿಂದ ಬಿಎಸ್‌ಎಫ್ ಸಿಬ್ಬಂದಿಯನ್ನು ಏನು ಕರೆಸಿಕೊಂಡಿದ್ದೆವು ಅವರು ನಮ್ಮ ಟಾಸ್ಕ್‌ಫೋರ್ಸ್ ಜೊತೆಯಲ್ಲಿ ಮುಂದುವರೆಯುತ್ತಾರೆ ಎಂದು ಹೇಳುತ್ತಾ, ಇವತ್ತು ನಾವು ಕಾರ್ಯಾಚರಣೆ ಬಗ್ಗೆ ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಕಾರ್ಯಾಚರಣೆಯ ಒಂತದೃಷ್ಟಿಯಿಂದ ನಾನು ಏನೂ ವಿವರಗಳನ್ನು ಕೊಡದೇ ಹೋದರೆ ಹಿರಿಯ ಸದಸ್ಯರುಗಳು ತಪ್ಪು ತಿಳಿಯುವುದಿಲ್ಲ ಎಂದು ನಾನು ಭಾವಿಸಿದ್ದೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಇದು ಆಗಲೇ ಟೆಲಿಪ್ರಿಂಟರ್‌ನಲ್ಲಿ ಬಂದಿದೆ ಎಂದು ಹೇಳುತ್ತಿದ್ದಾರೆ. ಅದನ್ನು ಕನ್‌ಫರ್ಮ್ ಮಾಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಬಂಧನದಲ್ಲಿದ್ದ ಅಧಿಕಾರಿಗಳು ಬಿಡುಗಡೆಯಾಗಿದ್ದಾರೆ. ಅದು ಎಲ್ಲಾ ಹೊರಗಡೆ ಬಹಿರಂಗವಾಗುತ್ತಿದೆ. ಆ ವಿಷಯ ಪತ್ರಿಕೆಯಲ್ಲಿ ನಾಳೆ ಬರುತ್ತದೆ. ಅಲ್ಲಿ ಯಾವ ಯಾವ ಅಧಿಕಾರಿಗಳು ಬಿಡುಗಡೆಯಾದರೆಂದು. ನೀವು ಇಲ್ಲಿ ಗೋಪ್ಯತೆ ಇಟ್ಟುಕೊಂಡರೆ ಏನು ಬಂತು?

ಅಧ್ಯಕ್ಷರು : ನಿಮ್ಮ ಮುಂದಿನ ತಂತ್ರಗಳನ್ನು ಗೌಪ್ಯವಾಗಿ ಇಡತಕ್ಕಂಥಾದ್ದು ಅಗತ್ಯ. ಈಗ ಬಹಿರಂಗ ಆಗಿರತಕ್ಕದ್ದನ್ನು ಕನ್‌ಫರ್ಮ್ ಮಾಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಬಹಿರಂಗವಾಗಿರುವುದನ್ನು ಹೇಳುವುದರಲ್ಲಿ ಅರ್ಥವೇ ಇಲ್ಲ. You are not allowing me to complete my statement. ನಾನು ಈ ಸದನದಲ್ಲಿ ಸಂಪೂರ್ಣವಾಗಿ ಸರಿಯಾದ ಸಂದರ್ಭದಲ್ಲಿ ವಿಶ್ವಾಸವನ್ನು ತೆಗೆದುಕೊಂಡು ಎಲ್ಲಾ ವಿವರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಿಳಿಸುತ್ತೇನೆ. ಎನ್ನುವಂತಹ ವಾಗ್ದಾನವನ್ನು ಕೊಡುತ್ತಿದ್ದೇನೆ. ಅದರ ಜೊತೆಗೆ ಇವತ್ತು ಬೆಳಿಗ್ಗೆ ಈ ಸದನಕ್ಕೆ ಬರುವುದಕ್ಕೆ ಮುನ್ನ ಕೆಲವು ಮಾಹಿತಿಗಳು ಇರುತ್ತವೆ. ನಾನು ಅದನ್ನೆಲ್ಲಾ ಕೊಡತಕ್ಕಂಥದ್ದು ಸೂಕ್ತವಲ್ಲವೆಂದು ತಮಗೆ ಗೊತ್ತಿದೆ. ಕೆಲವು ವಿಚಾರಗಳನ್ನು ಮಾತ್ರ ಈ ಸಂದರ್ಭದಲ್ಲಿ ತಿಳಿಸುತ್ತಿದ್ದೇನೆ. ಇವತ್ತು ಬೆಳಿಗ್ಗೆ ನಮ್ಮ ಕಾರ್ಯಾಚರಣೆಯ ಮುಖ್ಯಸ್ಥರು ಆಗಿರುವಂತಹ ಶ್ರೀ ಶಂಕರ್‌ಬಿದರಿಯವರು ನಮಗೆ ಕೊಟ್ಟಿರುವಂತಹ ಸುದ್ದಿ ಪ್ರಕಾರವಾಗಿ ವೀರಪ್ಪನ್ ಜೊತೆಯಲ್ಲಿ ಬಹಳ ಪ್ರಮುಖವಾಗಿ ಅವರ ಬಲಗೈಯಾಗಿ ಕೆಲಸ ಮಾಡುತ್ತಿದ್ದಂತಹ ಅಯ್ಯನ್ ದೊರೈ ಮತ್ತು ಇತರ ಮೂವರು ಕೊಯಮತ್ತೂರು ಜಿಲ್ಲಾಧಿಕಾರಿಯವರಿಗೆ ಶರಣಾಗಿದ್ದಾರೆ. ಅವರ ಜೊತೆಯಲ್ಲಿ ಇದ್ದಂತಹ ರೈಫಲ್‌ಗಳು ಮತ್ತು ಕಾಟ್‌ರೇಜಸ್‌ಗಳನ್ನು ಸಹಿತ ಜಿಲ್ಲಾಧಿಕಾರಿಯವರ ವಶಕ್ಕೆ ನೀಡಿದ್ದಾರೆ. ಒತ್ತೆಯಾಳುಗಳನ್ನಾಗಿ ಇಟ್ಟುಕೊಂಡಿದ್ದ ಡಿ.ವೈ.ಎಸ್.ಪಿ. ಶ್ರೀ ಚಿದಂಬರಂ, ಕಾನ್ಸ್‌ಟೇಬಲ್ ರಾಜಗೋಪಾಲ್ ಮತ್ತು ಅವರ ಬ್ರದರ್ ಇನ್ ಲಾ ಶೇಖರ್ ಇವರನ್ನೆಲ್ಲಾ ವೀರಪ್ಪನ್ ಏನು ಹೋಸ್ಟೇಜಸ್ ಆಗಿ ಇಟ್ಟು ಕೊಂಡಿದ್ದ ಅವರನ್ನೆಲ್ಲಾ ಬಿಡುಗಡೆ ಮಾಡಿದ್ದಾರೆ. ಇದಿಷ್ಟು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳಬಲ್ಲೆ. ಉಳಿದಿರುವಂತಹ ವಿಚಾರಗಳನ್ನು ಏನು ಎಂಬುದು ಕಾರ್ಯಾಚರಣೆ ಮುಂದುವರೆಯುತ್ತಿದೆ. ಮುಂದೆ ಬಂದ ವಿಚಾರಗಳನ್ನು ಈ ಸದನದ ವಿಶ್ವಾಸವನ್ನು ತೆಗೆದುಕೊಂಡು ನಾನು ಖಂಡಿತವಾಗಿ ತಿಳಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಗೃಹ ಸಚಿವರು ಹೇಳಿದ್ದುದು ಸರಿಯಾಗಿದೆ. ಕೆಲವು ವಿಚಾರಗಳನ್ನು ಕಾರ್ಯಾಚರಣೆಯ ದೃಷ್ಟಿಯಿಂದ ಗೋಪ್ಯವಾಗಿಡುವುದು ಒಳ್ಳೆಯ ಸಂಗತಿ. ಆದರೆ ನಮಗೆ ಕಳಕಳಿ ಇರುವುದೇನೆಂದರೆ ಒತ್ತೆಯಾಲುಗಳನ್ನಾಗಿ ಇಟ್ಟುಕೊಂಡಿದ್ದಂತಹ ಅಧಿಕಾರಿಗಳು ಪ್ರಾಣಸಹಿತ ಬಂದಿದ್ದಾರೆ ಎಂಬುದು ತುಂಬಾ ಸಂತೋಷದ ವಿಷಯ. ವೀರಪ್ಪನ್ ಕಡೆಯವರನ್ನು ಹಿಡಿದದ್ದು ಮಹತ್ತರವಾದ ಸಂಗತಿಯಲ್ಲ. ಈಗ ವೀರಪ್ಪನನ್ನು ಹಿಡಿಯುವುದು ಮಹತ್ತರವಾದ ಸಂಗತಿ. ಅದಾದ ಮೇಲೆ ತಾವು ವರದಿಯನ್ನು ಕೊಡಿ. ಅದರ ಬಗ್ಗೆ ನನ್ನ ಪ್ರಶ್ನೆ ಇಲ್ಲ. ಇವತ್ತು ಸಾಹಸಮಾಡಿದಂತಹವರ ಬಗ್ಗೆ ಪತ್ರಿಕೆಗಳಲ್ಲಿ ಬರುವುದಕ್ಕಿಂತ ಮುಂಚೆ ಇಡೀ ದೇಶದ ಜನರು ಈ ಬಗ್ಗೆ ಗಮನ ಕೊಟ್ಟು ನೋಡುತ್ತಿದ್ದಾರೆ. ಈ ಸಾಹಸ ಮಾಡಿದಂತಹ ಸಿಬ್ಬಂದಿಗಳಿಗೆ ಅಭಿನಂದನೆಯನ್ನು ಸಲ್ಲಿಸುವಂಥಾದ್ದು ಅತ್ಯವಶ್ಯಕವಾದುದು. ಮಾನ್ಯ ಗೃಹಮಂತ್ರಿಗಳು ಕಾರ್ಯಾಚರಣೆಯ ಅಧಿಕಾರಿಗಳೊಡನೆ ವೀರಪ್ಪನ್‌ನನ್ನು ಬಂಧನ ಮಾಡುವಂತಹ ಸುದ್ದಿ ಜೀವಂತವಾದರೂ ಆಗಬಹುದು, ಅದನ್ನಾದರೂ ತಿಳಿಯುವುದಕ್ಕೆ ಅವರ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದರೆ ಒಳ್ಳೆಯದೆಂದು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಗೃಹ ಸಚಿವನಾದ ನಾನು ಯಾರ ಜೊತೆಯಲ್ಲಿ ಸಂಬಂಧವಿಟ್ಟುಕೊಳ್ಳಬೇಕೆನ್ನುವುದರ ಬಗ್ಗೆ ನಿಯಮಾವಳಿಗಳಿರುತ್ತದೆ. ನೇರವಾಗಿ ಯಾವ

ರೀತಿ ಏನು ಮಾಡಬೇಕೆನ್ನುವುದರ ಬಗ್ಗೆಯೂ ನಿಯಮಾವಳಿಯ ಪ್ರಕಾರವಾಗಿ ನಡೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ತಾವು ಗೌಪ್ಯವಾಗಿಯೇ ಇಟ್ಟುಕೊಳ್ಳಿ. ನಮ್ಮದೇನೂ ತಕರಾರಿಲ್ಲ. ನಿಮ್ಮ ಸಂಬಂಧಗಳ ಬಗ್ಗೆ ನಾವು ಪ್ರಶ್ನೆ ಮಾಡುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದರಲ್ಲಿ ಗೌಪ್ಯವೇನಿಲ್ಲ. ನಿಯಮಾವಳಿಗಳ ಪ್ರಕಾರವಾಗಿ ನಾನು ನಡೆಯಬೇಕಾಗುತ್ತದೆ. ಕಾರ್ಯಾಚರಣೆಯನ್ನು ಹೋಗಿ ನಾನು ಮಾಡುವುದಕ್ಕಾಗುವುದಿಲ್ಲ. ಇಷ್ಟೇ ಹೇಳುತ್ತೇನೆ. ಇವತ್ತು ಏನು ಕಾರ್ಯಾಚರಣೆ ನಡೆಯುತ್ತಿದೆ. ಅದು ತಮಿಳುನಾಡು ಮತ್ತು ಕರ್ನಾಟಕದ ಎರಡೂ ಟಾಸ್ಕ್‌ಫೋರ್ಸ್‌ಗಳು, ಬಿ.ಎಸ್.ಎಫ್.ಗಳ ಸಹಾಯದಿಂದ ಜಾಯಿಂಟ್ ಆಪರೇಷನ್ ಮಾಡುತ್ತಿದ್ದಾರೆ. ಇದು ಮುಂದುವರೆಯುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಹಿಡಿಯುವ ಭರವಸೆ ಇದೆಯೋ? ತಾವು ಗೋಪ್ಯವನ್ನು ಏನೂ ಹೇಳಬೇಕಾಗಿಲ್ಲ. ತಾವು ಹಿಡಿಯುವ ಭರವಸೆ ಏನಾದರೂ ಇದ್ದರೆ ಹೇಳುತ್ತೀರಾ?

ಅಧ್ಯಕ್ಷರು : ಬೇಡ, ಬೇಡ. Let us not go into the details.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೆಚ್ಚಿಗೆ ಹೇಳುವುದು ಏನಿಲ್ಲ. ಜಾಯಿಂಟ್ ಆಪರೇಷನ್‌ನಲ್ಲಿ ನಮ್ಮ ಟಾಸ್ಕ್‌ಫೋರ್ಸ್ ಎಸ್.ಟಿ.ಎಫ್. ಮತ್ತು ಅವರ ಎಸ್.ಟಿ.ಎಫ್. ಇವೆ. ನಮ್ಮ ಎಸ್.ಟಿ.ಎಫ್.ಗೆ ಬಿ.ಎಸ್.ಎಫ್ ಸಹಾಯ ಮಾಡುತ್ತಿದೆ. ಅದು ರೆಕಾರ್ಡ್‌ನಲ್ಲಿ ಸಹ ಹೋದರೆ ಒಳ್ಳೆಯದು. I think better we correct it. I was a party to the agreement with Dr. Jayalalitha.

ನಮ್ಮ ಸರ್ಕಾರ, ತಮಿಳುನಾಡಿನ ಸರ್ಕಾರದ ಜೊತೆಯಲ್ಲಿ ಒಪ್ಪಂದವಾಗಿದೆ. ನಾವು ಅವರು ಜೊತೆಯಲ್ಲಿ ಈ ಕೆಲಸ ಮಾಡಬೇಕೆಂದು ಆಗಿದೆ. ಜಾಯಿಂಟ್ ಕಮಾಂಡರ್ ಅವರು ಮಾಡಬೇಕು, ನಮ್ಮ ಕಮಾಂಡರ್ ಶಂಕರಬಿದರಿ, ಮತ್ತು ನಮಗೆ ಸಹಾಯ ಮಾಡುವುದಕ್ಕೆ ಬಿ.ಎಸ್.ಎಫ್. ಸಹಾಯವನ್ನು ತೆಗೆದುಕೊಂಡಿದ್ದೇವೆ. ತಮಿಳುನಾಡಿನವರು ಬಿ.ಎಸ್.ಎಫ್. ಸಹಾಯ ತೆಗೆದುಕೊಂಡಿಲ್ಲ. There is a very clear understanding.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಮ್ಮ ಮಾಜಿ ಮುಖ್ಯಮಂತ್ರಿಗಳು ಮತ್ತು ಗೌರವಾನ್ವಿತ ಹಿರಿಯ ಸದಸ್ಯರಾದ ಶ್ರೀ ವೀರಪ್ಪ ಮೊಯಿಲಿಯವರು ಹೇಳಿರತಕ್ಕಂಥದ್ದು ಸರಿಯಾಗಿದೆ. ಅವರು ಡಾ|| ಜಯಲಲಿತ ಅವರೊಂದಿಗೆ, ಮಾತನಾಡಿರತಕ್ಕಂಥದ್ದನ್ನು ಹಾಗೂ ಅವೆಲ್ಲಾ ವಿವರಗಳನ್ನು ನಾನು ನೋಡಿದ್ದೇನೆ. ಈಗ ತಾವು ಏನು ಹೇಳಿದ್ದೀರಾ ಈ ನಮ್ಮ ಟಾಸ್ಕ್ ಫೋರ್ಸ್‌ಗೆ ಬಿಎಸ್‌ಎಫ್ ನವರು ಅಸಿಸ್ಟ್ ಮಾಡುತ್ತಿದ್ದಾರೆ. ಆದರೆ, ಇಲ್ಲಿ ಜಾಯಿಂಟ್ ಆಪರೇಷನ್ ಆಗಿರುವುದು ತಮಿಳುನಾಡಿನ ಫಾರೆಸ್ಟ್ ಏರಿಯಾದಲ್ಲಿ.

ಶ್ರೀ ಹೆಚ್. ಎನ್. ನಂಜೇಗೌಡ : ಬಿಎಸ್‌ಎಫ್‌ಗೆ ಸಹಾಯ ಮಾಡುತ್ತಾರೆ ಅಂದರೆ ಕರ್ನಾಟಕ ಸರ್ಕಾರ ಅದರ ಖರ್ಚುವೆಚ್ಚ ವಹಿಸಿಕೊಂಡಿದೆ ಎಂಬುದು ನಿಜವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಹೌದು.

ಶ್ರೀ ವಾಟಾಳ್ ನಾಗಾರಾಜ್ ; ಈಗ ಗಡಿ ಭದ್ರತಾ ಪಡೆಯರರು ಇದ್ದಾರೋ? ಈಗ ಬಹಳ ಜನ ಹೋಗಿದ್ದಾರಲ್ಲಾ? ಇದರಲ್ಲಿ ಎಷ್ಟು ಜನ ಇದ್ದಾರೆ, ಎಷ್ಟು ಜನ ಹೋಗಿದ್ದಾರೆ? ಅದನ್ನು ಸ್ವಲ್ಪ ಹೇಳಿ ಅದೇನೂ ಗೋಪ್ಯ ಅಲ್ಲವಲ್ಲ.

ಅಧ್ಯಕ್ಷರು : ಗೋಪ್ಯ ಏನೂ ಇಲ್ಲ, ಆದರೆ ಸಮಯ ಇಲ್ಲ.